ಅಡ್ಡಗಟ್ಟಿದ ಚಂದಿರನಂತೆ ಅವಳ ಬೆಳದಿಂಗಳ ಮುಖ ಮಂಕಾಗುತ್ತಿತ್ತು. ಚೈತ್ರನಿಗೆ ಅವಳ ಮುಖದ ಮೇಲಿನ ಕೂದಲು ಹಿಂಸರಿಸಿ, ಕೆನ್ನೆತೀಡಿ ಸಮಾಧಾನ ಮಾಡಬೇಕೆಂಬ ಬಯಕೆ ತೀವ್ರವಾದಾಗಲೂ ಅದುಮಿಟ್ಟು ಆಕೆ ಮುಚ್ಚಿದ ಮುಖ ತೆರೆಯುವುದನ್ನೇ ಕಾದ. ಈ ನಡುವೆ ಮತ್ತೊಮ್ಮೆ ತನ್ನ ಕೂದಲಿಗೆ ಕೈಹಾಕಿ ಹಿಂದಕ್ಕೆಳೆದುಕೊಂಡ. ಶರ್ಟಿನ ತೋಳು ಮಡಚಿದ. ಸಿಗರೇಟು ಸೇದಲು ಕಿಸೆಗೆ ಕೈಹಾಕಿದವನು, ಏನೆಂದುಕೊಳ್ಳುತ್ತಾಳೋ ಎಂದು ಸುಮ್ಮನಾದ. ಚಡಪಡಿಕೆ ತಾಳದೆ ಗಡ್ಡ ಕೆರೆದ. ಸುನಯನ ಮಂಡಿಯಿಂದ ಮುಖತೆಗೆದು, ಮುಖಮುಚ್ಚಿಕೊಂಡಿದ್ದ ಬೊಗಸೆ ತೆಗೆದು ಇವನತ್ತ ನೋಡಿದಾಗ ಪೆದ್ದಾಗಿ ನಕ್ಕ. ಹತ್ತಿರದಲ್ಲೇ ಇದ್ದ ಚಿಕ್ಕ ಕಲ್ಲೊಂದನ್ನು ತೆಗೆದುಕೊಂಡು ಪ್ರಪಾತಕ್ಕೆ ಬೀಸಿ, ಇವಳತ್ತ ತಿರುಗಿ ಮತ್ತೊಮ್ಮೆ ನಕ್ಕ. ಮಾತನಾಡುತ್ತಾಳೇನೋ ಎಂದು ಕಾದ. ಬರಿಗಾಳಿಯ ಸದ್ದು ಇಬ್ಬರ ಕಿವಿಗಳನ್ನು ತುಂಬತೊಡಗಿದಾಗ —ಈ ಮುಂಚೆ ಪ್ರಪಾತಕ್ಕೆಸೆದ ಕಲ್ಲು — ನಾನಾಗಿದ್ದರೆ? ಎಂಬ ಯೋಚನೆ ಬಂತು. ಜಾರಿಬೀಳುವ ಮೊದಲು — ಬದುಕಿರಲು ಇನ್ನಾವುದಾದರೂ ಕಾರಣ ಸಿಕ್ಕೀತೆ ಎಂದು ಯೋಚಿಸುತ್ತಿದ್ದೆನೇನೊ ಬಹುಶಃ ಅಂದುಕೊಂಡ. ಅವಳು ಇನ್ನೂ ಮೌನವಾಗೇ ಇರುವುದನ್ನು ಕಂಡು ಮ್‌ಹೂಹುಹ್ ಎಂದು ಗಂಟಲು ಸರಿಮಾಡಿಕೊಂಡು ತಾನೇ ಮಾತಾಡಲು ಅಣಿಯಾದ.

★★★

ಕೇಳಿದೆ:

ಯಾಕೆ ಸುನಯನ, ಸುಮ್ಮನಾಗಿಬಿಟ್ಟರಿ? ನನ್ನಿಂದೇನಾದರೂ ನೋವಾಯಿತೆ? ಅಥವಾ ನಿಮ್ಮದೆನ್ನುವುದೆಲ್ಲ ಹೇಳಿಕೊಳ್ಳಲು ನಾನು ಅರ್ಹವ್ಯಕ್ತಿಯಲ್ಲವೆಂದು ಅನ್ನಿಸಿತೆ? ಹಾಗಿದ್ದರೆ ಬೇಡ ಹೇಳುವುದು. ಮನದಕುದಿ ಕಡಿಮೆಯಾಗಲು, ನಿರಾಳವಾಗಲು. ಸುಖದುಃಖ ಹಂಚಿಕೊಳ್ಳಲು ಗೆಳೆಯರು ಬೇಕು. ಆದರೆ ಮನಸ್ಸು, ಮನುಷ್ಯರಷ್ಟೇ ವಿಚಿತ್ರಪ್ರಾಣಿ. ಯಾವಾಗಲೂ ತೆರೆದುಕೊಳ್ಳುತ್ತದೆ. ಯಾವಾಗಲೋ ಮುಚ್ಚಿಕೊಳ್ಳುತ್ತದೆ. ಈ ಮನಸ್ಸಿಗೆ ಯಾರಿಗೂ ತೋರಿಸಲಾರದಂಥ ಕತ್ತಲೆಯ ಮೂಲೆಗಳಿರುತ್ತವೆ. ಈ ಕತ್ತಲೆಯ ಬೀದಿ ಬೀದಿಗಳಲ್ಲಿ ದಿಕ್ಕರಿಸುತ್ತ ತಿರುಗುವ ಚಪಲವಿರುತ್ತದೆ. ಈ ಹಾಳು ಮನಸ್ಸಿಗೆ, ಕೆಲವನ್ನು ಯಾರೊಟ್ಟಿಗೂ ಹಂಚಿಕೊಳ್ಳಬಾರದೆನಿಸುತ್ತದಲ್ಲವೆ? ಇದು ಅಪನಂಬಿಕೆಯ ಪ್ರಶ್ನೆಯಲ್ಲ — ಹೇಳಲಾಗುವುದಿಲ್ಲ. ಅಷ್ಟೇ. ಆದರೆ ಮನಸ್ಸಿನ ಎಲ್ಲ ಬಾಗಿಲು — ಸಾಧ್ಯತೆಗಳನ್ನು ಮುಚ್ಚಿಕೊಂಡು ಮೂಕರಾಗಿಬಿಡಬಾರದಲ್ಲವೆ? ಮನುಷ್ಯನಿಗೆ ಯಾವ ಒಗಟುಗಳು ಇರಬಾರದು ಎನ್ನುವವ ನಾನು. ನೀವೇನೆನ್ನುತ್ತೀರಿ? ನಿಮಗೆ ಹೆಚ್ಚೇನೂ ಹೇಳೆನು ನಾನು. ನೀವು ಕಥೆಗಾರ್ತಿ. ನನಗಿಂತ ಬಹಳ ಬದುಕನ್ನು ಕಂಡಿದ್ದೀರಿ. ಬಹಳ ದಣಿದಿದ್ದೀರಿ. ಇಂದಿಗಿಷ್ಟು ಸಾಕು. ನಮ್ಮ ಮುಂದೆ ಎಷ್ಟೊಂದು ಹೊಸ ನಾಳೆಗಳಿವೆಯಲ್ಲವೆ. ಅವುಗಳ ಕುರಿತು ಮಾತಾಡೋಣ. ಮಾತು ಬೇಸರವಾದಾಗ ನಗೋಣ. ಸುಮ್ಮನೆ. ಯಾವ ಕಾರಣವೂ ಇಲ್ಲದೆ ! ಆದರೆ ನೀವೀಗ ಮಾತಾಡಿ ಹೈರಾಣವಾಗಿದ್ದೀರಿ. ನಿಮಗೀಗ ವಿಶ್ರಾಂತಿಬೇಕು. ಉಂಡು, ಎಲ್ಲ ಮರೆತು ನಿದ್ರಿಸಿ. ಎದ್ದಾಗ ಹೊಸಬರಾಗಿರುತ್ತೀರಿ. ನಿದ್ದೆ ಎಲ್ಲವನ್ನೂ ಮರೆಸುವ, ಮನುಷ್ಯನ ನಿಜವಾದ ಗೆಳೆಯ. ಈಗ ಹೋಗೋಣವೇ? — ಹೀಗೆ ಬನ್ನಿ.

(ಮುಂದಿನ ಸಂಚಿಕೆಗೆ)